ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೇಶವ ಪ್ರಸಾದ್ ಎಸ್. ಇವರ ನಿಯಮ 330ರ ಸೂಚನೆಗೆ ಉತ್ತರ ಒದಗಿಸುವ ಕುರಿತು.

ಪ್ರಶ್ನೆ:-

"ನೇಕಾರಿಕೆ ಕೃಷಿಯ ನಂತರ ಅತಿ ಹೆಚ್ಚು ಉದ್ಯೋಗ ಒದಗಿಸಬಲ್ಲ, ಸೃಷ್ಟಿಬಲ್ಲ ಕ್ಷೇತ್ರ. ಇಂದು ಕರ್ನಾಟಕದಲ್ಲಿ ನೇಕಾರ, ನೇಕಾರಿಕೆ ಯಾವ ಸ್ಥಿತಿಯಲ್ಲಿದೆ ಎಂಬುದನ್ನು ನಾವು ಗಂಭೀರವಾಗಿ ಅವಲೋಕಿಸುವ, ಕಾನೂನು ಮಾಡುವ, ಕಾರ್ಯಗತಗೊಳಿಸುವ ಮೇಲ್ಮನೆಯಲ್ಲಿ ಚರ್ಚಿತವಾಗಬೇಕಾದ ಆದ್ಯತೆಯ ವಿಷಯವಾಗಿದೆ."

ಕರ್ನಾಟಕ ನೇಕಾರಿಕೆಗೆ ಹೆಸರುವಾಸಿ ರಾಜ್ಯ. ಇಲ್ಲಿ ಕೈಮಗ್ಗ, ವಿದ್ಯುತ್ ಚಾಲಿತ ಮಗ್ಗ, ನೇಕಾರಿಕೆಗೆ ಪೂರಕವಾದ ಹತ್ತಿ ನೂಲು, ರೇಷ್ಮೆ, ನೂಲಿಗೆ ಬಣ್ಣ ಹಾಕುವುದು, ಟ್ವಿಸ್ಟಿಂಗ್ ಹೀಗೆ ಅನೇಕ ನೇಕಾರಿಕೆಯ ಸುತ್ತ ಬದುಕು ಕಟ್ಟಿಕೊಂಡಿರುವ ಸಾವಿರಾರು ಕುಟುಂಬಗಳು ರಾಜ್ಯದಾದ್ಯಂತ ಹರಡಿವೆ. ವಿಶೇಷವಾಗಿ ಕರ್ನಾಟಕದ ಉತ್ತರ ಭಾಗದ ಬೆಳಗಾವಿ, ಬಾಗಲಕೋಟೆ, ವಿಜಯಪುರ, ಗದಗ, ಹುಬ್ಬಳ್ಳಿ ಹಾಗೂ ಕರ್ನಾಟಕದ ದಕ್ಷಿಣ ಭಾಗವಾದ ಚಿತ್ರದುರ್ಗ, ತುಮಕೂರು, ಬೆಂಗಳೂರು, ಬೆಂಗಳೂರು ಗ್ರಾಮಾಂತರ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಪರಂಪರಾಗತ ನೇಕಾರಿಕೆಯೊಡನೆ ಆಧುನಿಕ ವಿದ್ಯುತ್ ಚಾಲಿತ ಮಗ್ಗಗಳು ಚಾಲನೆಯಲ್ಲಿವೆ. ನೇಕಾರನ ಬದುಕು ನಿಜಕ್ಕೂ ಹೇಗಿದೆ, ಆತನ ನೈಜ ಸಮಸ್ಯೆಗಳೇನು, ಬದುಕು ಸಾಗಿಸಲು ನೇಕಾರ ಪಡುತ್ತಿರುವ ಕಷ್ಟ ಎಲ್ಲವನ್ನೂ ಎಳೆ ಎಳೆಯಾಗಿ ಚರ್ಚಿಸಬೇಕಿದೆ. ಸರ್ಕಾರದ ವಿವಿಧ ಸೌಲತ್ತು, ಯೋಜನೆಗಳು, ಸಹಾಯಧನದ ಹೊರತಾಗಿಯೂ ನೇಕಾರನ ಬವಣೆ ನೀಗಿಲ್ಲ. ನೇಕಾರ, ನೇಕಾರಿಕೆ, ಅವನ ಬದುಕು, ಬವಣೆ, ಪರಿಹಾರೋಪಾಯಗಳನ್ನು ವಿವರವಾಗಿ ಚರ್ಚಿಸಲು ನಿಯಮ 330 ರ ಅಡಿಯಲ್ಲಿ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರಲ್ಲಿ ವಿಷಯವನ್ನು ಪ್ರಸ್ತಾಪಿಸಲು ಬಯಸುತ್ತೇನೆ.

ಉತ್ತರ:-

2019-20 ನೇ ಸಾಲಿನ ಕೇಂದ್ರ ಸರ್ಕಾರದ 4ನೇ ರಾಷ್ಟ್ರೀಯ ಕೈಮಗ್ಗ ಗಣತಿ ಪ್ರಕಾರ ರಾಜ್ಯದಲ್ಲಿ 54791 ಕೈಮಗ್ಗ ನೇಕಾರರಿದ್ದು, 29377 ಕೈಮಗ್ಗಗಳು ಹಾಗೂ 2021-22 ನೇ ಸಾಲಿನ ರಾಜ್ಯ ಸರ್ಕಾರದ ವಿದ್ಯುತ್‌ಮಗ್ಗ ಗಣತಿ ಪ್ರಕಾರ ರಾಜ್ಯದಲ್ಲಿ 90645 ನೇಕಾರರು / ಕಾರ್ಮಿಕರಿದ್ದು, 96658 ವಿದ್ಯುತ್‌ಮಗ್ಗಗಳು ಇರುತ್ತವೆ. ನೇಕಾರರ ಜೀವನಮಟ್ಟ ಸುಧಾರಣೆಗಾಗಿ ಇಲಾಖೆಯಿಂದ ಹಲವಾರು ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ನೇಕಾರರು ನೇಕಾರಿಕೆ ಮತ್ತು ಇತರೆ ಪೂರಕ ನೇಕಾರಿಕೆ ಚಟುವಟಿಕೆಗಳನ್ನು ನಡೆಸಲು "ನೇಕಾರರ ಸಮ್ಮಾನ್ ಯೋಜನೆ" ಯಡಿ ರೂ.5000/- ಗಳ ವಾರ್ಷಿಕ ಆರ್ಥಿಕ ನೆರವನ್ನು ನೇರ ನಗದು ಮೂಲಕ ನೀಡಲಾಗುತ್ತಿದೆ.

ಕೈಮಗ್ಗ ನೇಕಾರರು ತಾವು ಉತ್ಪಾದಿಸಿದ ಉತ್ಪನ್ನಗಳ ಮಾರಾಟದ ಮೇಲೆ ರಾಜ್ಯ ಸರ್ಕಾರದ ಶೇಕಡ 20 ರಿಬೇಟ್‌ನ್ನು ನೀಡಲಾಗುತ್ತಿದೆ.

ಕೈಮಗ್ಗ ವಲಯದಲ್ಲಿ ಸುಸ್ಥಿರ ಉದ್ಯೋಗ ಒದಗಿಸಲು **"ಮಹಾತ್ಮಗಾಂಧಿ ವಸ್ತ್ರೋದ್ಯಮ ಕೋಶ"** ವನ್ನು ಸ್ಥಾಪಿಸಲು ಕ್ರಮಕೈಗೊಳ್ಳಲಾಗುತ್ತಿದ್ದು, ಸದರಿ ಕೋಶವು ವಿನ್ಯಾಸಕರು, ನೇಕಾರರು, ನೂಲು ಬಿಚ್ಚಣಿಕೆದಾರರು, ಮತ್ತಿತ್ತರರನ್ನು ಒಂದೇ ವೇದಿಕೆಯಲ್ಲಿ ತರುವುದರೊಂದಿಗೆ ಮಾರುಕಟ್ಟೆಯೊಂದಿಗೆ ಸಮನ್ವಯಗೊಳಿಸಿ ಕುಸಿತ ಕಾಣುತ್ತಿರುವ ಕೈಮಗ್ಗ ಉದ್ಯಮದ ಪುನಃಶ್ಚೇತನಕ್ಕೆ ನೆರವಾಗಲು ಕ್ರಮವಹಿಸಲಾಗುತ್ತಿದೆ.

ಕೇಂದ್ರ ಸರ್ಕಾರದ ರಾಷ್ಟ್ರೀಯ ಕೈಮಗ್ಗ ಅಭಿವೃದ್ಧಿ ಕಾರ್ಯಕ್ರಮ (NHDP) ದಡಿ ರಾಷ್ಟ್ರೀಯ ಕೈಮಗ್ಗ ಮೇಳ (NHE), ರಾಜ್ಯ ಮಟ್ಟದ ಕೈಮಗ್ಗ ಮೇಳ (SHE) ಹಾಗೂ ಜಿಲ್ಲಾ ಮಟ್ಟದ ಕೈಮಗ್ಗ ಮೇಳ (DLE) ಗಳನ್ನು ಆಯೋಜಿಸಿ ಕೈಮಗ್ಗ ನೇಕಾರರು ತಾವು ಉತ್ಪಾದಿಸುವ ಕೈಮಗ್ಗ ಉತ್ಪನ್ನಗಳಿಗೆ ಮಾರುಕಟ್ಟೆ ಸೌಲಭ್ಯವನ್ನು ಒದಗಿಸಲಾಗುತ್ತಿದೆ.

ವಿದ್ಯುತ್ ಮಗ್ಗ ಹಾಗೂ ಮಗ್ಗ ಪೂರ್ವ ಘಟಕಗಳಿಗೆ ರಾಜ್ಯದ ಶೇ.80 ರಷ್ಟು ಸಣ್ಣ ಪ್ರಮಾಣದ ನೇಕಾರರಿಗೆ ಅನುಕೂಲ ಮಾಡಲು "10 ಹೆಚ್.ಪಿ ವರೆಗೆ ವಿದ್ಯುತ್ ಸಂಪರ್ಕ ಹೊಂದಿರುವ / ಪಡೆದ ವಿದ್ಯುತ್ ಮಗ್ಗ ಹಾಗೂ ಮಗ್ಗ ಪೂರ್ವ ಘಟಕಗಳಿಗೆ Energy Charges + Fixed Charges(FC) + Fuel adjustment charges(FAC) + Tax ಸೇರಿದಂತೆ ಸಂಪೂರ್ಣ ಬಿಲ್ ಮೊತ್ತವನ್ನು ಸರ್ಕಾರದಿಂದ ಭರಿಸಿ ಹಾಗೂ "ಶೂನ್ಯ ಬಿಲ್" ನೀಡಲಾಗುತ್ತಿದೆ.

"10.1 ಹೆಚ್.ಪಿ ಯಿಂದ 20 ಹೆಚ್.ಪಿ ವರೆಗೆ ವಿದ್ಯುತ್ ಸಂಪರ್ಕ ಹೊಂದಿರುವ / ಪಡೆದ ವಿದ್ಯುತ್ ಮಗ್ಗ ಹಾಗೂ ಮಗ್ಗ ಪೂರ್ವ ಘಟಕಗಳಿಗೆ ಬಳಸಿದ ಒಟ್ಟು ಯೂನಿಟ್‌ಗಳಿಗೆ ಪ್ರತಿ ಯೂನಿಟ್‌ಗೆ ರೂ.1.25 ರಂತೆ ವಿದ್ಯುತ್ ಶುಲ್ಕವನ್ನು (Energy Charges) ಘಟಕದವರು ಪಾವತಿಸುವುದು. ಬಾಕಿ ಉಳಿಯುವ ವಿದ್ಯುತ್ ಶುಲ್ಕದ ಮೊತ್ತವನ್ನು ಮಾತ್ರ ಸರ್ಕಾರದ ಬೊಕ್ಕಸದಿಂದ ಭರಿಸುವುದು. ಉಳಿದಂತೆ, ನಿಗದಿತ ಶುಲ್ಕ (Fixed Charges), ಇಂಧನ ಹೊಂದಾಣಿಕಾ ಶುಲ್ಕ (Fuel adjustment charges), ವಿದ್ಯುತ್ ತೆರಿಗೆ (Tax) ಮೊತ್ತಗಳನ್ನು ನೇಕಾರರೇ / ಘಟಕದವರೇ ಭರಿಸಲಾಗುತ್ತಿದೆ.

ಇದರಿಂದಾಗಿ ರಾಜ್ಯದಲ್ಲಿನ 01 ರಿಂದ 10 ಹೆಚ್.ಪಿ ವರೆಗಿನ ಸುಮಾರು 29288 ಘಟಕಗಳು ಹಾಗೂ 10ಕ್ಕಿಂತ ಹೆಚ್ಚು ಮತ್ತು 20 ಹೆಚ್.ಪಿ ವರೆಗಿನ ಸುಮಾರು 2067 ವಿದ್ಯುತ್ ಮಗ್ಗ ಹಾಗೂ ಮಗ್ಗ ಪೂರ್ವ ಘಟಕಗಳು ಹೀಗೆ ಒಟ್ಟು 31355 ಘಟಕಗಳು ಪ್ರಯೋಜನ ಪಡೆಯುತ್ತಿರುತ್ತಾರೆ.

ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಮಾರುಕಟ್ಟೆ ಸಂಕೀರ್ಣ ಸ್ಥಾಪನೆಗಾಗಿ ರೇಷ್ಮೆ ಇಲಾಖೆಯಿಂದ 02 ಎಕರೆ ಜಮೀನು ಮಂಜೂರಾಗಿದ್ದು, ಪ್ರಸ್ತಾಪಿತ ಜಮೀನಿನಲ್ಲಿ ಇಲಾಖೆಯ ಅಧೀನದಲ್ಲಿ ಇರುವ ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ನಿಗಮದ ಮುಖಾಂತರ ಮಾರುಕಟ್ಟೆ ಸಂಕೀರ್ಣವನ್ನು ಸ್ಥಾಪಿಸಲು ಕ್ರಮವಹಿಸಲಾಗುವುದು.

ದಿನಾಂಕ: 27.11.2025 ರಂದು ದೊಡ್ಡಬಳ್ಳಾಪುರದಲ್ಲಿ ಸಮಸ್ತ ನೇಕಾರರು ಚಳುವಳಿ ನಡೆಸಿ ಸೂರತ್ ಹಾಗೂ ಬೆಳಗಾವಿಯಿಂದ ಸ್ಥಳೀಯ ವ್ಯಾಪ್ಯಾರಿಗಳೇ ಇಲ್ಲಿಗೆ ತಂದು ಮಾರಾಟ ಮಾಡುವ ಮೂಲಕ ಇಲ್ಲಿನ ನೇಯ್ಗೆ ಉದ್ದಿಮೆಗೆ ತೊಂದರೆ ಉಂಟಾಗಿರುತ್ತದೆ ಎಂದು ಮನವಿಯಲ್ಲಿ ತಿಳಿಸಿರುತ್ತಾರೆ.

**ನೇಕಾರರನ್ನು ಸಾಮಾಜಿಕ ಹಾಗೂ ಆರ್ಥಿಕವಾಗಿ ಮೇಲೆತ್ತಲು ಹಾಗೂ ನೇಕಾರರು ಎದುರಿಸುತ್ತಿರುವ ಸಮಸ್ಯೆಗಳನ್ನು ಬಗೆಹರಿಸಲು ಇಲಾಖೆಯಿಂದ ಈ ಕೆಳಕಂಡ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಲಾಗುತ್ತಿದೆ.**

**ಅ) ನೇಕಾರರ ಸಮ್ಮಾನ್ ಯೋಜನೆ:-**

- ಕೈಮಗ್ಗ ನೇಕಾರರ ಚಟುವಟಿಕೆಗಳ ಪಾರಂಪರಿಕ ಕಲೆ ಮತ್ತು ಅವರ ಶ್ರಮವನ್ನು ಪರಿಗಣಿಸಿ ಹಾಗೂ ಕೋವಿಡ್-19 ಮಹಾಮಾರಿ ಮತ್ತು ಆರ್ಥಿಕ ಹಿನ್ನೆಡೆಯಿಂದ ಸಂಕಷ್ಟದಲ್ಲಿರುವ ಕೈಮಗ್ಗ ನೇಕಾರರಿಗೆ 2020-21 ನೇ ಸಾಲಿನಿಂದ ಅನ್ವಯವಾಗುವಂತೆ, **"ನೇಕಾರರ ಸಮ್ಮಾನ್"** ಯೋಜನೆಯನ್ನು ಘೋಷಿಸುವ ಮೂಲಕ ರೂ.2,000/- ಗಳ ವಾರ್ಷಿಕ ಆರ್ಥಿಕ ನೆರವನ್ನು ನೇರ ನಗದು ವರ್ಗಾವಣೆ ಮೂಲಕ ನೀಡಲು ಆದೇಶಿಸಲಾಗಿರುತ್ತದೆ.
- 2022-23 ನೇ ಸಾಲಿನ ಆಯವ್ಯಯ ಘೋಷಣೆ ಕಂಡಿಕೆ-268 ರಲ್ಲಿ ನೋಂದಾಯಿತ ಕೈಮಗ್ಗ ನೇಕಾರರಿಗೆ "ನೇಕಾರರ ಸಮ್ಮಾನ್" ಯೋಜನೆಯಡಿಯಲ್ಲಿ ರೂ.2,000/- ಗಳ ವಾರ್ಷಿಕ ಆರ್ಥಿಕ ನೆರವನ್ನು ನೀಡಲಾಗುತ್ತಿದ್ದು, ಇದನ್ನು ರೂ.5,000/- ಗಳಿಗೆ ಹೆಚ್ಚಿಸಲಾಗಿರುತ್ತದೆ.

(ರೂ.ಲಕ್ಷಗಳಲ್ಲಿ)

| ರೂ.5,000/- ರಂತೆ | | | | | |
|---|---|---|---|---|---|
| 2022-23 | | 2023-24 | | 2024-25 | |
| ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 2293.35 | 45867 | 2220.30 | 44406 | 1539.45 | 30789 |

**ಆ) ಕೈಮಗ್ಗ ವಿಕಾಸ ಯೋಜನೆ:-**

ರಾಜ್ಯದ ಕೈಮಗ್ಗ ವಲಯದಲ್ಲಿ ಕೈಮಗ್ಗಗಳು ಗಣನೀಯವಾಗಿ ಕಡಿಮೆಯಾಗುತ್ತಿರುವ ಹಿನ್ನೆಲೆಯಲ್ಲಿ ಹಾಲಿ ಇರುವ ನೇಕಾರರು ಕೈಮಗ್ಗ ನೇಯ್ಗೆ ವೃತ್ತಿಯನ್ನು ಮುಂದುವರಿಸಿ ಅಭಿವೃದ್ಧಿ ಪಡಿಸಿಕೊಳ್ಳಲು ಹಾಗೂ ಯುವ ನೇಕಾರರನ್ನು ಕೈಮಗ್ಗ ನೇಯ್ಗೆ ವೃತ್ತಿಯೆಡೆಗೆ ಆಕರ್ಷಿಸುವ ಉದ್ದೇಶದಿಂದ ಹತ್ತಿ / ರೇಷ್ಮೆ / ಉಣ್ಣೆ ಕ್ಷೇತ್ರದಲ್ಲಿ ಹೊಸ ಕೈಮಗ್ಗ ಹಾಗೂ ಅಗತ್ಯ ಸಲಕರಣೆಗಳನ್ನು ಖರೀದಿಸಲು ಘಟಕ ವೆಚ್ಚದ ಶೇಕಡ 50 ರಷ್ಟು ಸಹಾಯಧನ ಒದಗಿಸಲಾಗುತ್ತಿದೆ.

| ಕ್ರಸಂ | ವಿವರ | ಘಟಕ ವೆಚ್ಚ (ರೂ.ಗಳಲ್ಲಿ) |
|---|---|---|
| 1. | ಉಣ್ಣೆ ಕೈಮಗ್ಗ ಸಲಕರಣೆಗಳೊಂದಿಗೆ (ಗುಣಿ ಮಗ್ಗ) | 30,000/- |
| 2 | ಉಣ್ಣೆ ಕೈಮಗ್ಗ ಸಲಕರಣೆಗಳೊಂದಿಗೆ (ಫ್ರೇಮ್ ಮಗ್ಗ) | 50,000/- |
| 3 | ಹತ್ತಿ ಸಾದ ಕೈಮಗ್ಗ ಸಲಕರಣೆಗಳೊಂದಿಗೆ | 30,000/- |

...3

| | | |
|---|---|---|
| 4 | ಹತ್ತಿ ಸೀರೆ ಕುಣಿಮಗ್ಗ ಸಲಕರಣೆಗಳೊಂದಿಗೆ | 30,000/- |
| 5 | ಫ್ರೇಮ್ ಲೂಮ್ 400 ಹುಕ್ಸ್ ಜಕಾರ್ಡ್ ಹಾರ್ನೆಸ್, ನ್ಯೂಮ್ಯಾಟಿಕ್ ಸಿಸ್ಟಮ್ ಮತ್ತು ಎಲ್ಲಾ ಸಲಕರಣೆಗಳೊಂದಿಗೆ | 50,000/- |
| 6 | ರೇಷ್ಮೆ ಸಾದ ಕೈಮಗ್ಗ (ಕುಣಿ ಮಗ್ಗ) ಸಲಕರಣೆಗಳೊಂದಿಗೆ | 30,000/- |
| 7 | ರೇಷ್ಮೆ ಸೀರೆ ಕೈಮಗ್ಗ ಡಾಬಿ, ಜಕಾರ್ಡ್, ಹಾರ್ನೆಸ್, ನ್ಯೂಮ್ಯಾಟಿಕ್ ಸಿಸ್ಟಮ್ ಮತ್ತು ಎಲ್ಲಾ ಸಲಕರಣೆಗಳೊಂದಿಗೆ | 50,000/- |
| 8 | ಸೆಕ್ಷನಲ್ ವಾರ್ಪಿಂಗ್ ಯಂತ್ರ, ವಿ ಟೈಪ್ 400 ಬಾಬಿನ್ ಕ್ರೀಲ್‌ನೊಂದಿಗೆ | 45,000/- |
| 9 | ಡ್ರಮ್ ಟೈಪ್ ವಾರ್ಪಿಂಗ್ ಯಂತ್ರ 400 ಬಾಬಿನ್ ಕ್ರೀಲ್‌ನೊಂದಿಗೆ | 50,000/- |

**ಇ) ಕೈಮಗ್ಗಗಳಿಗೆ ನ್ಯೂಮ್ಯಾಟಿಕ್ / ಮೋಟರೈಸ್ಡ್ ಜಕಾರ್ಡ್ ಸಲಕರಣೆಗಳ ಕಿಟ್ ಒದಗಿಸುವ ಯೋಜನೆ:-**

ಕೈಮಗ್ಗಗಳನ್ನು ಹೊಂದಿರುವ ಘಟಕಗಳಿಗೆ ನೇಕಾರರ ಹೆಚ್ಚಿನ ಪರಿಶ್ರಮವನ್ನು ತಪ್ಪಿಸಿ ಹೆಚ್ಚಿನ ಉತ್ಪಾದನೆ ಹಾಗೂ ಗುಣಮಟ್ಟದ ಉತ್ಪಾದನೆಗೆ ಅನುಕೂಲವಾಗುವಂತೆ ಮೋಟರೈಸ್ಡ್ ಜಕಾರ್ಡ್ ಸಲಕರಣೆಗಳ ಕಿಟ್ ಒದಗಿಸಲು ಪ್ರತಿ ಘಟಕಕ್ಕೆ ವೆಚ್ಚವಾಗುವ ಮೊತ್ತಕ್ಕೆ ಸರ್ಕಾರದ ವತಿಯಿಂದ ಸಾಮಾನ್ಯ ವರ್ಗದವರಿಗೆ ಶೇ.50 ರಷ್ಟು ಸಹಾಯಧನ ಹಾಗೂ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಶೇ.90 ರಷ್ಟು ಸಹಾಯಧನವನ್ನು ಒದಗಿಸುವುದು.

(ರೂ.ಗಳಲ್ಲಿ)

| ಕ್ರಸಂ | ಕೈಮಗ್ಗಗಳ ಸಂಖ್ಯೆ | ಮೋಟರೈಸ್ಡ್ ಜಕಾರ್ಡ್ ಘಟಕ ವೆಚ್ಚ | ನ್ಯೂಮ್ಯಾಟಿಕ್ ಜಕಾರ್ಡ್ ವೆಚ್ಚ | ಸರ್ಕಾರದ ಸಹಾಯಧನ 50% (ಸಾಮಾನ್ಯ ವರ್ಗ) | ಸರ್ಕಾರದ ಸಹಾಯಧನ 90% (ಪ.ಜಾ/ಪ.ಪಂ) |
|---|---|---|---|---|---|
| 1 | 1 | 15,000 | – | 7,500 | 13,500 |
| 2 | 2 | – | 33,000 | 16,500 | 29,700 |
| 3 | 4 | – | 50,000 | 25,000 | 45,000 |

- ➢ ಈ ಯೋಜನೆಯನ್ನು ಕೈಮಗ್ಗ ನೇಕಾರರ ಸಹಕಾರ ಸಂಘಗಳು ಹಾಗೂ ವೈಯಕ್ತಿಕ ಕೈಮಗ್ಗ ನೇಕಾರರು ಪಡೆಯಲು ಅರ್ಹರಿರುತ್ತಾರೆ.
- ➢ ಕೈಮಗ್ಗ ನೇಕಾರರ ಸಹಕಾರ ಸಂಘ ಅಥವಾ ವೈಯಕ್ತಿಕ ಕೈಮಗ್ಗ ನೇಕಾರರ ಫಲಾನುಭವಿಗಳು ತಮ್ಮ ವಂತಿಕೆಯನ್ನು ಬ್ಯಾಂಕ್ ಅಥವಾ ಹಣಕಾಸು ಸಂಸ್ಥೆಗಳಿಂದ ಸಾಲದ ರೂಪದಲ್ಲಿ ಅಥವಾ ಸ್ವಂತವಾಗಿ ಭರಿಸತಕ್ಕದ್ದು.

**ಈ) ಕೈಮಗ್ಗ ವಿನ್ಯಾಸಗಳ ಉನ್ನತೀಕರಣಕ್ಕಾಗಿ ಎಲೆಕ್ಟ್ರಾನಿಕ್ ಜಕಾರ್ಡ್ ಒದಗಿಸುವ ಯೋಜನೆ:-**

ಕೈಮಗ್ಗಗಳನ್ನು ಹೊಂದಿರುವ ಘಟಕಗಳಿಗೆ ಮಾರುಕಟ್ಟೆಯ ಬೇಡಿಕೆಗೆ ತಕ್ಕಂತೆ ವಿಶಿಷ್ಟ ವಿನ್ಯಾಸಗಳನ್ನು ಅಳವಡಿಸಲು ಪ್ರತಿಯೊಂದು ಉತ್ಪನ್ನಗಳಿಗೆ ಒಂದೊಂದು ಪ್ರತ್ಯೇಕ ವಿನ್ಯಾಸ ನೇಯಲು ಅನುಕೂಲವಾಗುವಂತೆ ಹೊಸ ಮಾದರಿಯ ಎಲೆಕ್ಟ್ರಾನಿಕ್ ಜಕಾರ್ಡ್‌ಗಳನ್ನು ಒದಗಿಸಲು ಪ್ರತಿ ಘಟಕಕ್ಕೆ ವೆಚ್ಚವಾಗುವ ಮೊತ್ತಕ್ಕೆ ಸರ್ಕಾರದ ವತಿಯಿಂದ ಸಾಮಾನ್ಯ ವರ್ಗದವರಿಗೆ ಶೇ.50 ರಷ್ಟು ಸಹಾಯಧನ ಹಾಗೂ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಶೇ.90 ರಷ್ಟು ಸಹಾಯಧನವನ್ನು ಒದಗಿಸುವುದು.

(ರೂ.ಲಕ್ಷಗಳಲ್ಲಿ)

| ಕ್ರಸಂ | ಹುಕ್ಸ್‌ಗಳ ಸಂಖ್ಯೆ | ಅಂದಾಜು ಘಟಕ ವೆಚ್ಚ | ಸರ್ಕಾರದ ಸಹಾಯಧನ 50% (ಸಾಮಾನ್ಯ ವರ್ಗ) | ಸರ್ಕಾರದ ಸಹಾಯಧನ 90% (ಪ.ಜಾ/ಪ.ಪಂ) |
|---|---|---|---|---|
| 1 | 640/672 | 2.50 | 1.25 | 2.25 |
| 2 | 960 | 3.50 | 1.75 | 3.15 |
| 3 | 1344/1792 | 4.50 | 2.25 | 4.05 |

- ➢ ಈ ಯೋಜನೆಯನ್ನು ಕೈಮಗ್ಗ ನೇಕಾರರ ಸಹಕಾರ ಸಂಘಗಳು ಹಾಗೂ ವೈಯಕ್ತಿಕ ಕೈಮಗ್ಗ ನೇಕಾರರು ಪಡೆಯಲು ಅರ್ಹರಿರುತ್ತಾರೆ.
- ➢ ಕೈಮಗ್ಗ ನೇಕಾರರ ಸಹಕಾರ ಸಂಘ ಅಥವಾ ವೈಯಕ್ತಿಕ ಕೈಮಗ್ಗ ನೇಕಾರರ ಫಲಾನುಭವಿಗಳು ತಮ್ಮ ವಂತಿಕೆಯನ್ನು ಬ್ಯಾಂಕ್ ಅಥವಾ ಹಣಕಾಸು ಸಂಸ್ಥೆಗಳಿಂದ ಸಾಲದ ರೂಪದಲ್ಲಿ ಅಥವಾ ಸ್ವಂತವಾಗಿ ಭರಿಸತಕ್ಕದ್ದು.

**ಉ) ಸಹಕಾರ ಬ್ಯಾಂಕ್‌ಗಳು ನೀಡಿದ ಶೂನ್ಯ / 1% ಮತ್ತು 3% ಸಾಲದ ಮೇಲೆ ಬಡ್ಡಿ ಸಹಾಯಧನ ಹಾಗೂ ಶೇ.8 ರ ಬಡ್ಡಿ ಸಹಾಯಧನ:-**

ನೇಕಾರರ ಸಹಕಾರ ಸಂಘಗಳು / ಕೈಗಾರಿಕಾ ಸಹಕಾರ ಬ್ಯಾಂಕ್‌ಗಳು / ಕೃಷಿಯೇತರ / ಕೃಷಿ ಪತ್ತಿನ ಸಹಕಾರ ಸಂಘಗಳು / ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳು ಹಾಗೂ ಇತರೆ ಸಹಕಾರ ಬ್ಯಾಂಕ್‌ಗಳು ರಾಜ್ಯದ ಕೈಮಗ್ಗ ಮತ್ತು ವಿದ್ಯುತ್‌ಮಗ್ಗಗಳ ನೇಕಾರರಿಗೆ ನೇಕಾರಿಕೆ ಮತ್ತು ನೇಕಾರಿಕೆಗೆ ಸಂಬಂಧಿಸಿದ ಉದ್ದೇಶಗಳಿಗಾಗಿ **ಶೂನ್ಯ'** ಬಡ್ಡಿ ದರದಲ್ಲಿ ರೂ.2.00 ಲಕ್ಷಗಳವರೆಗೆ ನೀಡುವ ಸಾಲಕ್ಕೆ ಸರ್ಕಾರದಿಂದ ಗರಿಷ್ಠ ಶೇ.11 ಬಡ್ಡಿ ಸಹಾಯಧನವನ್ನು ಎಲ್ಲಾ ರೀತಿಯ ಅಲ್ಪಾವಧಿ, ಮಧ್ಯಮಾವಧಿ ಮತ್ತು ಧೀರ್ಘಾವಧಿ ಸಾಲಗಳಿಗೆ ಬಡ್ಡಿ ಸಹಾಯಧನ ನೀಡಲಾಗುತ್ತಿದೆ.

ನೇಕಾರರ ಸಹಕಾರ ಸಂಘಗಳು / ಕೈಗಾರಿಕಾ ಸಹಕಾರ ಬ್ಯಾಂಕ್‌ಗಳು / ಕೃಷಿಯೇತರ / ಕೃಷಿ ಪತ್ತಿನ ಸಹಕಾರ ಸಂಘಗಳು / ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳು ಹಾಗೂ ಇತರೆ ಸಹಕಾರ ಬ್ಯಾಂಕ್‌ಗಳು ರಾಜ್ಯದ ಕೈಮಗ್ಗ ಮತ್ತು ವಿದ್ಯುತ್‌ಮಗ್ಗಗಳ ನೇಕಾರರಿಗೆ ನೇಕಾರಿಕೆ ಮತ್ತು ನೇಕಾರಿಕೆಗೆ ಸಂಬಂಧಿಸಿದ ಉದ್ದೇಶಗಳಿಗಾಗಿ **ಶೇ.1% ರ** ಬಡ್ಡಿ ದರದಲ್ಲಿ ರೂ.2.00 ಲಕ್ಷಗಳವರೆಗೆ ನೀಡುವ ಸಾಲಕ್ಕೆ ಸರ್ಕಾರದಿಂದ ಗರಿಷ್ಠ ಶೇ.10 ರಷ್ಟು ಬಡ್ಡಿ ಸಹಾಯಧನ ಮತ್ತು **ಶೇ.3%** ರ ಬಡ್ಡಿ ದರದಲ್ಲಿ ರೂ.2.00 ಲಕ್ಷಗಳಿಂದ ರೂ.5.00 ಲಕ್ಷಗಳವರೆಗೆ ನೀಡುವ ಸಾಲಕ್ಕೆ ಗರಿಷ್ಠ ಶೇ.8 ರಷ್ಟು ಬಡ್ಡಿ ಸಹಾಯಧನವನ್ನು ಎಲ್ಲಾ ರೀತಿಯ ಅಲ್ಪಾವಧಿ, ಮಧ್ಯಮಾವಧಿ ಮತ್ತು ಧೀರ್ಘಾವಧಿ ಸಾಲಗಳಿಗೆ ಬಡ್ಡಿ ಸಹಾಯಧನ ನೀಡಲಾಗುತ್ತಿದೆ.

ನೇಕಾರರಿಗೆ ನೇಕಾರಿಕೆ ಉದ್ದೇಶಕ್ಕಾಗಿ ಎದುರಿಸುತ್ತಿರುವ ಬಂಡವಾಳ ಕೊರತೆಯನ್ನು ನೀಗಿಸಲು ರಾಜ್ಯದ ಸಹಕಾರಿ ಮತ್ತು ವಾಣಿಜ್ಯ ಬ್ಯಾಂಕ್‌ಗಳ ಮೂಲಕ ಪಡೆಯುವ ಸಾಲದ ಮೇಲೆ **ಶೇ.8 ರಷ್ಟು** ಬಡ್ಡಿ ಸಹಾಯಧನವನ್ನು ಮರುಸಂದಾಯ ಮಾಡಲಾಗುವುದು.

(ರೂ.ಲಕ್ಷಗಳಲ್ಲಿ)

| ಯೋಜನೆಯ ಹೆಸರು | 2022-23 | | 2023-24 | | 2024-25 | |
|---|---|---|---|---|---|---|
| | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| ಶೂನ್ಯ ದರದಲ್ಲಿ ಬಡ್ಡಿ ಸಹಾಯಧನ | 0 | 0 | 0 | 0 | 1.92 | 2 |
| ಶೇ.1% ಶೇ.3% ರ ದರದಲ್ಲಿ ಬಡ್ಡಿ ಸಹಾಯಧನ | 199.89 | 38 | 193.31 | 46 | 169.72 | 39 |
| ರಾಜ್ಯದ ಸಹಕಾರಿ ಮತ್ತು ವಾಣಿಜ್ಯ ಬ್ಯಾಂಕ್‌ಗಳ ಮೂಲಕ ಪಡೆಯುವ ಸಾಲದ ಮೇಲೆ ಶೇ.8 ರಷ್ಟು ಬಡ್ಡಿ ಸಹಾಯಧನ | 0 | 0 | 0 | 0 | 1.04 | 1 |

**ಊ) ಕೈಮಗ್ಗ ಉತ್ಪನ್ನಗಳ ಮಾರಾಟ ಮೇಲೆ ಶೇ.20 ರಿಬೇಟ್ ಯೋಜನೆ:-**

ಕೈಮಗ್ಗ ನೇಕಾರರ ಸಹಕಾರ ಸಂಘಗಳು ಹಾಗೂ ಕೈಮಗ್ಗ ಮಹಾಮಂಡಳಗಳು ತಮ್ಮ ಕೈಮಗ್ಗ ಉತ್ಪನ್ನಗಳ ಮಾರಾಟದ ಮೇಲೆ ಸರ್ಕಾರ ನೀಡುವ ಶೇಕಡಾ 20 ರಿಬೇಟ್ ಅನ್ನು ವರ್ಷದ 365 ದಿನಗಳು ಮಾರಾಟ ಮಾಡಿದ ಕೈಮಗ್ಗ ಉತ್ಪನ್ನಗಳಿಗೆ ರಾಜ್ಯ ಸರ್ಕಾರ ವತಿಯಿಂದ ಮರುಪಾವತಿಸಲಾಗುತ್ತಿದೆ.

(ರೂ.ಲಕ್ಷಗಳಲ್ಲಿ)

| 2022-23 | | 2023-24 | | 2024-25 | |
|---|---|---|---|---|---|
| ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 500.00 | 82 | 719.85 | 91 | 504.30 | 82 |

**ಋ) ಕಚ್ಚಾಮಾಲು ಖರೀದಿ ಮೇಲೆ ಕೈಮಗ್ಗ ಸಹಕಾರ ಸಂಘಗಳಿಗೆ ಪ್ರತಿ ಕೆ.ಜಿ ಗೆ ರೂ.15/- ರ ಸಹಾಯಧನ:-**

ರಾಷ್ಟ್ರೀಯ ಕೈಮಗ್ಗ ಅಭಿವೃದ್ಧಿ ನಿಗಮ / ಅಧೀಕೃತ ಮಾರಾಟಗಾರರ ಮುಖಾಂತರ ಕೈಮಗ್ಗ ಸಹಕಾರ ಸಂಘಗಳು ಖರೀದಿಸುವ ಕಚ್ಚಾ ರೇಷ್ಮೆ, ಹತ್ತಿ, ಉಣ್ಣೆ ಮತ್ತು ಚಮ್ಮಕ ನೂಲಿಗೆ ಪ್ರತಿ ಕೆ.ಜಿ ಗೆ ರೂ.15/- ರ ಸಹಾಯಧನ ನೀಡಲಾಗುವುದು.

(ರೂ.ಲಕ್ಷಗಳಲ್ಲಿ)

| 2022-23 | | 2023-24 | | 2024-25 | |
|---|---|---|---|---|---|
| ಭೌತಿಕ | ಆರ್ಥಿಕ | ಭೌತಿಕ | ಭೌತಿಕ | ಆರ್ಥಿಕ | ಭೌತಿಕ |
| 15.04 | 32 | 4.83 | 21 | 2.62 | 20 |

**ಎ) ಮಿತವ್ಯಯ ನಿಧಿ ಯೋಜನೆ:-**

ಈ ಯೋಜನೆಯಡಿ ನೇಕಾರರಿಗೆ ಉಳಿತಾಯ ಪ್ರವೃತ್ತಿ ಬೆಳೆಸಿಕೊಳ್ಳಲು ಅನುಕೂಲವಾಗುವಂತೆ ಮಜೂರಿಯಿಂದ ಶೇಕಡ 8 ನ್ನು ಕಟಾಯಿಸಿ ರಾಜ್ಯ ಸರ್ಕಾರದ ಶೇಕಡ 8 ರ ಸಮಚಂದಾ ಸೇರಿಸಿ ಖಜಾನೆಯಲ್ಲಿ ಜಮಾ ಮಾಡಲಾಗುವುದು ಜಮೆಯಾದ ಮೊತ್ತಕ್ಕೆ ಶೇಕಡ 12 ರ ಬಡ್ಡಿಯನ್ನು ನೀಡಲಾಗುವುದು. ಈ ಯೋಜನೆಯ ಮೊತ್ತದಡಿ ಫಲಾನುಭವಿಗಳ ಮದುವೆ, ಮನೆ ನಿರ್ಮಾಣ, ವೈದ್ಯಕೀಯ ವೆಚ್ಚ ಮತ್ತು ಮಕ್ಕಳ ವಿದ್ಯಾಭ್ಯಾಸಕ್ಕೆ ಮುಂಗಡವನ್ನು ಪಡೆಯಬಹುದಾಗಿದೆ. ಈ ಹಣವನ್ನು ನೇಕಾರರು 5 ವರ್ಷಗಳ ನಂತರ ಭಾಗಶಃ ಹಿಂಪಡೆಯಬಹುದು ಮತ್ತು 15 ವರ್ಷಗಳ ನಂತರ ಪೂರ್ತಿ ಹಣವನ್ನು ಬಡ್ಡಿ ಸಹಿತ ಹಿಂಪಡೆಯಲು ಅವಕಾಶವಿರುತ್ತದೆ.

(ರೂ.ಲಕ್ಷಗಳಲ್ಲಿ)

| 2022-23 | | 2023-24 | | 2024-25 | |
|---|---|---|---|---|---|
| ಭೌತಿಕ | ಆರ್ಥಿಕ | ಭೌತಿಕ | ಭೌತಿಕ | ಆರ್ಥಿಕ | ಭೌತಿಕ |
| 100.00 | 70 | 271.05 | 86 | 330.76 | 90 |

**ಏ) ಸಾಮಾನ್ಯ ಸೌಲಭ್ಯ ಕೇಂದ್ರ:-**

ಪ್ರಾಥಮಿಕ ಕೈಮಗ್ಗ ನೇಕಾರರ ಸಹಕಾರ ಸಂಘಗಳು / ನೊಂದಾಯಿತ ಕೈಮಗ್ಗ ಸಂಘ / ಸಂಸ್ಥೆಗಳು ಯೋಜನೆಯ ಸೌಲಭ್ಯವನ್ನು ಪಡೆಯಬಹುದಾಗಿದ್ದು, ಸಂಘ / ಸಂಸ್ಥೆಗಳು ಕೈಮಗ್ಗ ಉತ್ಪನ್ನಗಳ ಉತ್ಪಾದನೆ ಮತ್ತು ಮಾರಾಟ ಚಟುವಟಿಕೆಗಳನ್ನು ನಿರ್ವಹಿಸುತ್ತಿರಬೇಕು.

➢ **ಸರ್ಕಾರದ ಸಹಾಯಧನ**

- ಡೈಹೌಸ್ ಕಟ್ಟಡ ನಿರ್ಮಾಣಕ್ಕೆ ರೂ.2.00 ಲಕ್ಷಗಳು ಹಾಗೂ ಯಂತ್ರೋಪಕರಣಗಳಿಗೆ ರೂ.3.00 ಲಕ್ಷಗಳು ಸೇರಿ ಒಟ್ಟು ಯೋಜನಾ ವೆಚ್ಚ ರೂ.5.00 ಲಕ್ಷಗಳು.
- ಸಾಮಾನ್ಯ ಸೌಲಭ್ಯ ಕೇಂದ್ರ ಕಟ್ಟಡ ನಿರ್ಮಾಣಕ್ಕೆ ರೂ.8.00 ಲಕ್ಷ ಹಾಗೂ ಯಂತ್ರೋಪಕರಣಗಳಿಗೆ ರೂ.2.00 ಲಕ್ಷ ಸೇರಿ ಒಟ್ಟು ಯೋಜನಾ ವೆಚ್ಚ ರೂ.10.00 ಲಕ್ಷಗಳು.
- ಡೈಹೌಸ್‌ನೊಂದಿಗೆ ಸಾಮಾನ್ಯ ಸೌಲಭ್ಯ ಕೇಂದ್ರ ಕಟ್ಟಡ ನಿರ್ಮಾಣಕ್ಕೆ ರೂ.10.00 ಲಕ್ಷಗಳು ಹಾಗೂ ಯಂತ್ರೋಪಕರಣಗಳಿಗೆ ರೂ.5.00 ಲಕ್ಷಗಳು ಸೇರಿ ಒಟ್ಟು ಯೋಜನಾ ವೆಚ್ಚ ರೂ.15.00 ಲಕ್ಷಗಳು.
- ಸರ್ಕಾರದಿಂದ ದೊರೆಯುವ ಅನುದಾನ- ಯೋಜನಾ ವೆಚ್ಚದ ಶೇಕಡ 80 ರಷ್ಟು
- ಫಲಾನುಭವಿ ಸಂಘ / ಸಂಸ್ಥೆಗಳು ಭರಿಸಬೇಕಾದ ವೆಚ್ಚ- ಯೋಜನಾ ವೆಚ್ಚದ ಶೇಕಡ 20 ರಷ್ಟು ಅಥವಾ ಅದಕ್ಕಿಂತ ಹೆಚ್ಚಿನ ಮೊತ್ತ ಭರಿಸುವುದು.

**ಐ) ಕೈಮಗ್ಗ ನೇಕಾರರ ಸಹಕಾರ ಸಂಘಗಳಿಗೆ ಒಂದಾವರ್ತಿ ಪ್ರೋತ್ಸಾಹಧನ:-**

ಕೈಮಗ್ಗ ನೇಕಾರರ ಸಹಕಾರ ಸಂಘಗಳು ಬ್ಯಾಂಕ್‌ಗಳಲ್ಲಿ ಹೂಡಿಕೆ ಮಾಡಿ ಸಾಲ ಎತ್ತುವ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವುದು ಹಾಗೂ ಸಂಘದ ಉತ್ಪಾದನಾ ಮತ್ತು ಮಾರಾಟ ಚಟುವಟಿಕೆಗಳ ವಹಿವಾಟನ್ನು ಅಭಿವೃದ್ಧಿಪಡಿಸಲು ಆವರ್ತಕ ನಿಧಿಯನ್ನು ಕೈಮಗ್ಗ ನೇಕಾರರ ಸಹಕಾರ ಸಂಘಗಳಿಗೆ 3 ವರ್ಷಗಳ ಸರಾಸರಿ ವಹಿವಾಟಿನ ಮೇಲೆ ಶೇ.50 ರಷ್ಟನ್ನು ರೂ.5.00 ಲಕ್ಷಗಳ ಗರಿಷ್ಠ ಮಿತಿಗೆ ಒಳಪಟ್ಟು ನೀಡಲಾಗುವುದು.

...6

ಒ) ಉಣ್ಣೆ ವಲಯ ಪುನಃಶ್ಚೇತನ ಮತ್ತು ಬಲವರ್ಧನೆ ಯೋಜನೆಯಡಿ ಸಹಾಯಧನ:-

ಉಣ್ಣೆ ವಲಯದ ಪುನಶ್ಚೇತನಕ್ಕಾಗಿ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಸದರಿ ಯೋಜನೆಯಡಿ ಉಣ್ಣೆ ಕತ್ತರಿಸುವ ಯಂತ್ರ, ಉಣ್ಣೆ ಕತ್ತರಿಸುವ ಟೇಬಲ್ / ಪೀಠೋಪಕರಣ, ಉಣ್ಣೆ ಸಾಗಣೆಕೆ ವಾಹನ, ಕಾರ್ಡಿಂಗ್ ಮೆಷಿನ್ ಖರೀದಿಸಲು ಹಾಗೂ ಉಣ್ಣೆ ಸಂಗ್ರಹಣ ಉಗ್ರಾಣ, ಸಾಮಾನ್ಯ ಸೌಲಭ್ಯ ಕೇಂದ್ರ ನಿರ್ಮಿಸಲು ಸಹಕಾರ ಸಂಘಗಳಿಗೆ ಆರ್ಥಿಕ ಸಹಾಯ ಒದಗಿಸಲಾಗುವುದು.

ಓ) ಕೈಮಗ್ಗ ನೇಕಾರರ ರಾಜ್ಯ ಮಟ್ಟದ ಪ್ರಶಸ್ತಿ:-

ಕೈಮಗ್ಗ ನೇಕಾರರಿಗೆ ಪ್ರತಿ ವರ್ಷ ರಾಷ್ಟ್ರೀಯ ಕೈಮಗ್ಗ ದಿನಾಚರಣೆ (7ನೇ ಆಗಸ್ಟ್) ಯಂದು ಕೈಮಗ್ಗ ಉತ್ಪನ್ನಗಳ ಅಭಿವೃದ್ಧಿಗಾಗಿ ಕೈಮಗ್ಗ ನೇಯ್ಗೆ ವೃತ್ತಿಯಲ್ಲಿ ನೈಪುಣ್ಯತೆ / ಶ್ರೇಷ್ಠತೆ / ತಾಂತ್ರಿಕತೆ / ಉತ್ಕೃಷ್ಠತೆ ಹೊಂದಿರುವ ಉತ್ಪನ್ನದ ಕೈಮಗ್ಗ ನೇಕಾರರಿಗೆ ರಾಜ್ಯ ಮಟ್ಟದ ಪ್ರಶಸ್ತಿಗಳನ್ನು ನೀಡಲಾಗುತ್ತಿದೆ. ಕೈಮಗ್ಗ ನೇಕಾರರಿಗೆ ನೀಡುವ ರಾಜ್ಯ ಮಟ್ಟದ ಪ್ರಶಸ್ತಿ ಯೋಜನೆಯ ಕಾರ್ಯಕ್ರಮವು ರೂ.5.00 ಲಕ್ಷಗಳ ಗರಿಷ್ಠ ಮಿತಿಗೆ ಒಳಪಟ್ಟಿದ್ದು, ಸದರಿ ಪ್ರಶಸ್ತಿಯು ನಗದು ಬಹುಮಾನ, ಒಂದು ನೆನಪಿನ ಕಾಣಿಕೆ, ಒಂದು ಶಾಲು ಹಾಗೂ ಪ್ರಶಸ್ತಿ ಪತ್ರ ಒಳಗೊಂಡಿರುತ್ತದೆ. ಪ್ರತಿ ಕೈಮಗ್ಗ ನೇಕಾರರ ಸನ್ಮಾನಕ್ಕಾಗಿ ರೂ.5,000/- ಗಳನ್ನು ನಿಗದಿಪಡಿಸಲಾಗಿರುತ್ತದೆ. ಪ್ರಸ್ತುತ ನಗದು ಬಹುಮಾನಗಳು ಈ ಕೆಳಕಂಡಂತಿದೆ.

(ರೂ.ಗಳಲ್ಲಿ)

| ಕ್ರಸಂ | ವಲಯ | ನಗದು ಬಹುಮಾನದ ವರ್ಗಗಳು | |
|---|---|---|---|
| | | ಪ್ರಥಮ | ದ್ವಿತೀಯ |
| 1 | ರೇಷ್ಮೆ | 25,000/- | 20,000/- |
| 2 | ಹತ್ತಿ | 20,000/- | 15,000/- |
| 3 | ಉಣ್ಣೆ | 15,000/- | - |

I. ವಿದ್ಯುತ್‌ಮಗ್ಗ ವಲಯ ಯೋಜನೆಗಳು:-

2021-22 ನೇ ಸಾಲಿನ ರಾಜ್ಯ ಸರ್ಕಾರದಿಂದ ವಿದ್ಯುತ್‌ಮಗ್ಗ ಗಣತಿ ಪ್ರಕಾರ ರಾಜ್ಯದಲ್ಲಿ 90645 ನೇಕಾರರು / ಕಾರ್ಮಿಕರಿದ್ದು, 96658 ವಿದ್ಯುತ್‌ಮಗ್ಗಗಳು ಇರುತ್ತವೆ. ರಾಜ್ಯದ 31 ಜಿಲ್ಲೆಗಳಲ್ಲಿ ವಿದ್ಯುತ್‌ಮಗ್ಗ ನೇಕಾರರು / ಮಗ್ಗ ಪೂರ್ವ ಘಟಕಗಳ ಕೆಲಸಗಾರರಿಗೆ ಸ್ಮಾರ್ಟ್ ಕಾರ್ಡ್‌ಗಳನ್ನು ವಿತರಿಸಲಾಗಿದೆ.

a) ನೇಕಾರರ ಸಮ್ಮಾನ್ ಯೋಜನೆ:-

ರಾಜ್ಯದಲ್ಲಿನ ವಿದ್ಯುತ್‌ಮಗ್ಗ ವಲಯದಲ್ಲಿ ನೇಕಾರನಾಗಿ ಅಥವಾ ಸ್ವಂತ ನೇಯ್ಗೆ ಕಾರ್ಮಿಕನಾಗಿ ಅಥವಾ ಮಗ್ಗ ಪೂರ್ವ ಘಟಕಗಳಲ್ಲಿ ನೇಕಾರಿಕೆಯ ಪೂರಕ ಚಟುವಟಿಕೆಗಳಾದ ಟ್ವಿಸ್ಟಿಂಗ್, ವೈಂಡಿಂಗ್, ಯಾರ್ನ್ ಡೈಯಿಂಗ್, ವಾರ್ಪಿಂಗ್, ಝರಿ ವೈಂಡಿಂಗ್ & ವಾರ್ಪಿಂಗ್, ವಾರ್ಪ್ ನಾಟಿಂಗ್, ಸೈಜಿಂಗ್ ಹಾಗೂ ಇತರೆ ವಿದ್ಯುತ್ ಮಗ್ಗ ಚಟುವಟಿಕೆಗಳಲ್ಲಿ ತೊಡಗಿರುವ ಫಲಾನುಭವಿಗಳಿಗೆ "ನೇಕಾರರ ಸಮ್ಮಾನ್ ಯೋಜನೆ" ಯಡಿ ರೂ.5,000/- ಗಳ ವಾರ್ಷಿಕ ಆರ್ಥಿಕ ನೆರವನ್ನು ನೀಡಲಾಗುವುದು. ವಿವರ ಈ ಕೆಳಗಿನಂತಿರುತ್ತದೆ.

(ರೂ.ಲಕ್ಷಗಳಲ್ಲಿ)

| (ರೂ.5000/- ಗಳಂತೆ) | | | | | |
|---|---|---|---|---|---|
| 2022-23 | | 2023-24 | | 2024-25 | |
| ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| 88923 | 4446.15 | 100569 | 5028.45 | 86673 | 4330.33 |

b) ನೇಕಾರರ ಮಕ್ಕಳಿಗೆ ವಿದ್ಯಾರ್ಥಿ ವೇತನ:-

ನೇಕಾರರ ಮಕ್ಕಳ ಉನ್ನತ ಶಿಕ್ಷಣ ಪ್ರೋತ್ಸಾಹಿಸಲು ಕರ್ನಾಟಕ ರಾಜ್ಯದ ಯಾವುದೇ ಭಾಗದಲ್ಲಿರುವ ಅಧಿಕೃತವಾಗಿ ನೋಂದಣಿಯಾಗಿರುವ ಶಿಕ್ಷಣ ಸಂಸ್ಥೆ / ವಿಶ್ವವಿದ್ಯಾಲಯಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಈ ಕೆಳಕಂಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಲಾಗುತ್ತಿದೆ. ವಿವರ ಈ ಕೆಳಗಿನಂತಿರುತ್ತದೆ.

| ಕ್ರಸಂ | ಕೋರ್ಸ್‌ನ ಹೆಸರು / ಕೋರ್ಸ್‌ನ ವಿಧಗಳು | ಹುಡುಗರು / ಪುರುಷರು | ಹುಡುಗಿಯರು / ಅನ್ಯ ಲಿಂಗದವರು |
|---|---|---|---|
| 1 | ಪದವಿಯ ಮುಂಚೆ ಪಿ.ಯು.ಸಿ / ಐ.ಟಿ.ಐ / ಡಿಪ್ಲೋಮಾ | ರೂ.2,500/- | ರೂ.3,000/- |
| 2 | ಎಲ್ಲಾ ಬಿ.ಎ/ಬಿ.ಎಸ್.ಸಿ/ ಬಿ.ಕಾಂ ಇತ್ಯಾದಿ. ಎಂ.ಬಿ.ಬಿ.ಎಸ್/ಬಿ.ಇ/ಬಿ.ಟೆಕ್ ಮತ್ತು ವೃತ್ತಿ ಪರ ಕೋರ್ಸ್‌ಗಳನ್ನು ಹೊರತುಪಡಿಸಿ | ರೂ.5,000/- | ರೂ.5,500/- |
| 3 | ಎಲ್.ಎಲ್.ಬಿ /ಪ್ಯಾರಾ ಮೆಡಿಕಲ್/ ಬಿ.ಫಾರ್ಮ್ / ನರ್ಸಿಂಗ್ ಇತ್ಯಾದಿ ವೃತ್ತಿ ಪರ ಕೋರ್ಸ್‌ಗಳು | ರೂ.7,500/- | ರೂ.8,000/- |
| 4 | ಎಂ.ಬಿ.ಬಿ.ಎಸ್/ಬಿ.ಇ/ಬಿ.ಟೆಕ್ ಮತ್ತು ಎಲ್ಲಾ ಸ್ನಾತಕೋತ್ತರ ಕೋರ್ಸ್‌ಗಳು | ರೂ.10,000/- | ರೂ.11,000/- |

(ರೂ.ಲಕ್ಷಗಳಲ್ಲಿ)

| 2022-23 | | 2023-24 | | 2024-25 | |
|---|---|---|---|---|---|
| ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| 3669 | 164.48 | 4478 | 223.80 | 2843 | 165.00 |

c) **02 ವಿದ್ಯುತ್ ಮಗ್ಗ ಖರೀದಿಗೆ ಸಹಾಯಧನ:-**

2011-12ನೇ ಸಾಲಿನ ಆಯವ್ಯಯದಲ್ಲಿ ನೇಕಾರರು ಎದುರಿಸುತ್ತಿರುವ ಸಮಸ್ಯೆಗಳನ್ನು ಬಗೆಹರಿಸಲು ಮತ್ತು ಅವರ ವರಮಾನ ಮಟ್ಟವನ್ನು ಹೆಚ್ಚಿಸಲು ನೇಕಾರರಿಗೆ ತಲಾ 2 ವಿದ್ಯುತ್ ಮಗ್ಗಗಳನ್ನು ಒದಗಿಸುವ ಒಂದು ಹೊಸ ಯೋಜನೆಯನ್ನು ಜಾರಿಗೊಳಿಸಲಾಗಿರುತ್ತದೆ. ಅದರಂತೆ ಪ್ರತಿ ನೇಕಾರರಿಗೆ ತಲಾ 2 ವಿದ್ಯುತ್ ಮಗ್ಗಗಳನ್ನು ಒದಗಿಸಲು ಉದ್ದೇಶಿಸಲಾಗಿರುತ್ತದೆ. 2022-23ನೇ ಸಾಲಿನಲ್ಲಿ ಸರ್ಕಾರದ ಆದೇಶ ಸಂಖ್ಯೆ: /83//2021 ದಿನಾಂಕ: 25.04.2022 ರಲ್ಲಿ ಘಟಕ ವೆಚ್ಚವನ್ನು ರೂ.3.00 ಲಕ್ಷಗಳಿಂದ ರೂ.3.50 ಲಕ್ಷಗಳಿಗೆ ಪರಿಷ್ಕರಿಸಲಾಗಿರುತ್ತದೆ. ವಿವರ ಈ ಕೆಳಗಿನಂತಿರುತ್ತದೆ.

- ಘಟಕ ವೆಚ್ಚ ರೂ.3.50 ಲಕ್ಷ
- ಸರ್ಕಾರದ ಸಹಾಯಧನ :
- ಸಾಮಾನ್ಯ ವರ್ಗ - ಶೇ.50 ಗರಿಷ್ಠ ರೂ.1.75 ಲಕ್ಷ / ಬ್ಯಾಂಕ್ ಸಾಲ - ಶೇ.50
- ಪ.ಜಾ/ಪ.ಪಂ - ಶೇ.90 ಗರಿಷ್ಠ ರೂ.3.15 ಲಕ್ಷ / ಬ್ಯಾಂಕ್ ಸಾಲ / ಫಲಾನುಭವಿ ವಂತಿಕೆ - ಶೇ.10.

(ರೂ.ಲಕ್ಷಗಳಲ್ಲಿ)

| 2022-23 | | 2023-24 | | 2024-25 | |
|---|---|---|---|---|---|
| ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| 78 | 202.52 | 60 | 125.67 | 26 | 57.63 |

d) **ಎಲೆಕ್ಟ್ರಾನಿಕ್ ಜಕಾರ್ಡ್ ಖರೀದಿಗೆ ಸಹಾಯಧನ:-**

ಹಾಲಿ ಕಾರ್ಯನಿರತ ವಿದ್ಯುತ್ ಮಗ್ಗಗಳಲ್ಲಿ ವಿನ್ಯಾಸವನ್ನು ಪ್ರತಿ ಬಾರಿ ಬದಲಾಯಿಸಲು ಪ್ರತಿಯೊಂದು ಬಾರಿ ಯಾಂತ್ರಿಕ ಸೆಟ್ಟಿಂಗ್ ಬದಲಾಯಿಸಬೇಕಾಗುತ್ತದೆ. ಆದ್ದರಿಂದ ಈ ತೊಂದರೆಯನ್ನು ತಪ್ಪಿಸಲು ಹಾಗೂ ಕನಿಷ್ಠ ವೆಚ್ಚದಲ್ಲಿ ಹೆಚ್ಚಿನ ವಿನ್ಯಾಸಗಳನ್ನು ಪಡೆಯಲು ಎಲೆಕ್ಟ್ರಾನಿಕ್ ಜಕಾರ್ಡ್ ಪರಿಚಯಿಸಲಾಗಿದೆ. ಇದು ಸೀರೆಗಳಲ್ಲಿ ವಿವಿಧ ಡಿಸೈನ್‌ಗಳನ್ನು ಅಳವಡಿಸಲು ಅನುಕೂಲವಾಗಲಿದೆ. ವಿವರ ಈ ಕೆಳಗಿನಂತಿರುತ್ತದೆ.

- ಘಟಕ ವೆಚ್ಚ ರೂ.4.50 ಲಕ್ಷ
- ಸರ್ಕಾರದ ಸಹಾಯಧನ :
- ಸಾಮಾನ್ಯ ವರ್ಗ - ಶೇ.50 ಗರಿಷ್ಠ ರೂ.2.25 ಲಕ್ಷ / ಬ್ಯಾಂಕ್ ಸಾಲ - ಶೇ.50
- ಪ.ಜಾ/ಪ.ಪಂ - ಶೇ.90 ಗರಿಷ್ಠ ರೂ.4.05 ಲಕ್ಷ / ಬ್ಯಾಂಕ್ ಸಾಲ - ಶೇ.10

(ರೂ.ಲಕ್ಷಗಳಲ್ಲಿ)

| 2022-23 | | 2023-24 | | 2024-25 | |
|---|---|---|---|---|---|
| ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| 113 | 355.75 | 128 | 332.17 | 86 | 280.72 |

e) **ವಿದ್ಯುತ್ ರಿಯಾಯಿತಿ ಸಹಾಯಧನ:-**

2023-24ನೇ ಸಾಲಿನ ಆಯವ್ಯಯ ಘೋಷಣೆ ಕಂಡಿಕೆ-265 ರನ್ವಯ "10 ಹೆಚ್.ಪಿ. ವರೆಗಿನ ವಿದ್ಯುತ್ ಸಂಪರ್ಕ ಹೊಂದಿರುವ ಮಗ್ಗ ಹಾಗೂ ಮಗ್ಗ ಪೂರ್ವ ಘಟಕಗಳಿಗೆ ಮಾಸಿಕ ಗರಿಷ್ಠ 250 ಯೂನಿಟ್‌ಗಳವರೆಗೆ ಉಚಿತ ವಿದ್ಯುತ್ ಒದಗಿಸುವ ಮೂಲಕ ನೇಕಾರರನ್ನು ಆರ್ಥಿಕ ಸ್ವಾವಲಂಬಿಗಳನ್ನಾಗಿಸಲು ಕ್ರಮ ವಹಿಸಲಾಗುವುದು" ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

1. ರಾಜ್ಯದ ಶೇ.80 ರಷ್ಟು ಸಣ್ಣ ಪ್ರಮಾಣದ ನೇಕಾರರಿಗೆ ಅನುಕೂಲವಾಗುವುದರಿಂದ "10 ಹೆಚ್.ಪಿ ವರೆಗೆ ವಿದ್ಯುತ್ ಸಂಪರ್ಕ ಹೊಂದಿರುವ / ಪಡೆದ ವಿದ್ಯುತ್ ಮಗ್ಗ ಹಾಗೂ ಮಗ್ಗ ಪೂರ್ವ ಘಟಕಗಳಿಗೆ Energy Charges + Fixed Charges(FC) + Fuel adjustment charges(FAC) + Tax ಸೇರಿದಂತೆ ಸಂಪೂರ್ಣ ಬಿಲ್ ಮೊತ್ತವನ್ನು ಸರ್ಕಾರದಿಂದ ಭರಿಸಿ ಹಾಗೂ "ಶೂನ್ಯ ಬಿಲ್" ನೀಡಲಾಗುತ್ತಿದೆ.
2. "10.1 ಹೆಚ್.ಪಿ ಯಿಂದ 20 ಹೆಚ್.ಪಿ ವರೆಗೆ ವಿದ್ಯುತ್ ಸಂಪರ್ಕ ಹೊಂದಿರುವ / ಪಡೆದ ವಿದ್ಯುತ್ ಮಗ್ಗ ಹಾಗೂ ಮಗ್ಗ ಪೂರ್ವ ಘಟಕಗಳಿಗೆ ಬಳಸಿದ ಒಟ್ಟು ಯೂನಿಟ್‌ಗಳಿಗೆ ಪ್ರತಿ ಯೂನಿಟ್‌ಗೆ ರೂ.1.25 ರಂತೆ ವಿದ್ಯುತ್ ಶುಲ್ಕವನ್ನು (Energy Charges) ಘಟಕದವರು ಪಾವತಿಸುವುದು. ಬಾಕಿ ಉಳಿಯುವ ವಿದ್ಯುತ್ ಶುಲ್ಕದ ಮೊತ್ತವನ್ನು ಮಾತ್ರ ಸರ್ಕಾರದ ಬೊಕ್ಕಸದಿಂದ ಭರಿಸುವುದು. ಉಳಿದಂತೆ, ನಿಗದಿತ ಶುಲ್ಕ (Fixed Charges), ಇಂಧನ ಹೊಂದಾಣಿಕಾ ಶುಲ್ಕ (Fuel adjustment charges), ವಿದ್ಯುತ್ ತೆರಿಗೆ (Tax) ಮೊತ್ತಗಳನ್ನು ನೇಕಾರರೇ / ಘಟಕದವರೇ ಭರಿಸತಕ್ಕದ್ದು" ಎಂದು ತಿದ್ದುಪಡಿ ಮಾಡಿ ದಿನಾಂಕ: 25.09.2024 ರಲ್ಲಿ ಆದೇಶ ಹೊರಡಿಸಲಾಗಿರುತ್ತದೆ.

ಇದರಿಂದಾಗಿ ರಾಜ್ಯದಲ್ಲಿನ 01 ರಿಂದ 10 ಹೆಚ್.ಪಿ ವರೆಗಿನ ಸುಮಾರು 29288 ಘಟಕಗಳು ಹಾಗೂ 10ಕ್ಕಿಂತ ಹೆಚ್ಚು ಮತ್ತು 20 ಹೆಚ್.ಪಿ ವರೆಗಿನ ಸುಮಾರು 2067 ವಿದ್ಯುತ್ ಮಗ್ಗ ಹಾಗೂ ಮಗ್ಗ ಪೂರ್ವ ಘಟಕಗಳು ಪ್ರಯೋಜನ ಪಡೆಯುತ್ತಿರುತ್ತಾರೆ. ವಿವರ ಈ ಕೆಳಗಿನಂತಿರುತ್ತದೆ.

(ರೂ.ಲಕ್ಷಗಳಲ್ಲಿ)

| ಕ್ರ.ಸಂ | ಯೋಜನೆ | 2023-24 | | 2024-25 | |
|---|---|---|---|---|---|
| | | ಘಟಕಗಳ ಸಂಖ್ಯೆ | ಬಿಡುಗಡೆ ಮಾಡಲಾದ ಅನುದಾನ | ಘಟಕಗಳ ಸಂಖ್ಯೆ | ಬಿಡುಗಡೆ ಮಾಡಲಾದ ಅನುದಾನ |
| 1 | ಸಾಮಾನ್ಯ | 28818 | 14840.00 | 30532 | 9500.00 |
| 2 | SCSP | 355 | 307.54 | 415 | 78.66 |
| 3 | TSP | 381 | 149.52 | 408 | 159.80 |
| ಒಟ್ಟು | | **29554** | **15297.06** | **31355** | **9738.46** |

f) **20 ರಿಂದ 200 ಹೆಚ್.ಪಿ.ವರೆಗಿನ / ವಿದ್ಯುತ್ ಮಗ್ಗ ಘಟಕಗಳಿಗೆ ಶೇ.50 ರಷ್ಟು ವಿದ್ಯುತ್ ಸಹಾಯಧನ:-**

20 ರಿಂದ 200 ಹೆಚ್.ಪಿ.ವರೆಗಿನ SCSP/TSP ವಿದ್ಯುತ್ ಮಗ್ಗ ಘಟಕಗಳಿಗೆ ಎಸ್ಕಾಂನಿಂದ ಪ್ರತಿ ಯೂನಿಟ್‌ಗೆ ನಿಗದಿಪಡಿಸಿದ ವಿದ್ಯುತ್ ದರದ (Energy Charges) ಮೊತ್ತದಲ್ಲಿ ಮಾತ್ರ ಶೇ.50 ರಷ್ಟು ವಿದ್ಯುತ್ ಸಹಾಯಧನವನ್ನು ಒದಗಿಸಲಾಗುತ್ತಿದೆ. ವಿವರ ಈ ಕೆಳಗಿನಂತಿರುತ್ತದೆ.

(ರೂ.ಲಕ್ಷಗಳಲ್ಲಿ)

| ಕ್ರ.ಸಂ | ಯೋಜನೆ | 2024-25 | |
|---|---|---|---|
| | | ಘಟಕಗಳ ಸಂಖ್ಯೆ | ಬಿಡುಗಡೆ ಮಾಡಲಾದ ಅನುದಾನ |
| 1 | SCSP | 8 | 246.34161 |
| 2 | TSP | 2 | 15.19473 |
| ಒಟ್ಟು | | **10** | **261.53634** |

**g) ನೇಕಾರರ ವಿಶೇಷ ಪ್ಯಾಕೇಜ್ ಯೋಜನೆ – ವಿಶೇಷ ಘಟಕ / ಗಿರಿಜನ ಉಪ ಯೋಜನೆಯಡಿ ಜವಳಿ ಕ್ಷೇತ್ರಕ್ಕೆ ಸಂಬಂಧಿಸಿದ ಸಣ್ಣ ಮತ್ತು ಅತಿ ಸಣ್ಣ (ಎಸ್.ಎಂ.ಇ) ಘಟಕ ಸ್ಥಾಪನೆಗೆ ಸಹಾಯಧನ:–**

ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ವೈಯಕ್ತಿಕ ಫಲಾನುಭವಿ / ಪಾಲುದಾರಿಕೆ ಸಂಸ್ಥೆ / ಸಂಘ ಸಂಸ್ಥೆಗಳು / ಕಂಪನಿ ಶೇ.100 ರಷ್ಟು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸದಸ್ಯರನ್ನು ಹೊಂದಿರತಕ್ಕದ್ದು. ಸಂಘ ಸಂಸ್ಥೆಗಳು ಜವಳಿ ಘಟಕಗಳನ್ನು ಸ್ಥಾಪಿಸಲು ಉದ್ದೇಶಿಸಿರುವ ಜವಳಿ ಸಹಕಾರ ಸಂಘ / ಎನ್.ಜಿ.ಓ / ಟ್ರಸ್ಟ್ / ಸಂಸ್ಥೆಗಳು ನೊಂದಾಯಿಸಿ 03 ವರ್ಷವಾಗಿರಬೇಕು.

ಮಾರ್ಗಸೂಚಿಯಂತೆ:– ಫಲಾನುಭವಿಗಳು ಸ್ಥಾಪಿಸುವ ಎಸ್.ಎಂ.ಇ ಘಟಕ ಯೋಜನಾ ವೆಚ್ಚದ ಮೇಲೆ ಶೇ.75 ರಂತೆ ಗರಿಷ್ಠ ಸಹಾಯಧನ ರೂ.200.00 ಲಕ್ಷ ಹಾಗೂ ನೂತನ ಜವಳಿ ನೀತಿಯನ್ವಯ ಗರಿಷ್ಠ ರೂ.75.00 ಲಕ್ಷಗಳ ಅವಧಿ ಸಾಲದ ಮೇಲೆ ಮೊದಲ 05 ವರ್ಷಗಳ ಅವಧಿಗೆ ಬಡ್ಡಿ ಸಹಾಯಧನ ನೀಡಲಾಗುವುದು. (ದಿನಾಂಕ:01.01.2022 ರಿಂದ ಅನುಮೋದಿಸಲಾಗುವ ಹೊಸ ಘಟಕಗಳಿಗೆ)

2017–18 ರಿಂದ ಇಲ್ಲಿಯವರೆಗೆ ಈ ಯೋಜನೆಯಡಿ 372 ಎಸ್.ಎಂ.ಇ ಘಟಕಗಳಿಗೆ ಅನುಮೋದನೆ ನೀಡಿದ್ದು, ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಿ ಸಾಲ ಮತ್ತು ಸ್ವಂತ ಬಂಡವಾಳ ಹೂಡಿದ ನಂತರ ಸಲ್ಲಿಸಲಾದ ಕ್ಲೇಮ್‌ಗಳಿಗೆ ಪ್ರೊರೇಟಾ ಆಧಾರದ ಮೇಲೆ ಸಾಲ ನೀಡದ ಬ್ಯಾಂಕ್ / ಹಣಕಾಸು ಸಂಸ್ಥೆಗಳಿಗೆ 04 ಕಂತುಗಳಲ್ಲಿ ಅಂದರೆ 1ನೇ ಕಂತಾಗಿ ಗರಿಷ್ಠ 30 ರಷ್ಟು, 2ನೇ ಕಂತಾಗಿ ಗರಿಷ್ಠ 30 ರಷ್ಟು, 3ನೇ ಕಂತಾಗಿ ಗರಿಷ್ಠ 30 ರಷ್ಟು ಹಾಗೂ 4ನೇ ಕಂತಾಗಿ ಗರಿಷ್ಠ 10 ರಷ್ಟು ಸಹಾಯಧನವನ್ನು ಬಿಡುಗಡೆ ಮಾಡಲಾಗುವುದು.

ಸರ್ಕಾರದ ಮೊದಲನೇ ವಂತಿಕೆ ಬಿಡುಗಡೆಯಾದ 18 ತಿಂಗಳ ಅವಧಿಯೊಳಗೆ ಫಲಾನುಭವಿ / ಜವಳಿ ಸಹಕಾರ ಸಂಘ / ಸಂಸ್ಥೆಯವರು ಯೋಜನೆಯನ್ನು ಪೂರ್ಣಗೊಳಿಸತಕ್ಕದ್ದು.

2021–22ನೇ ಸಾಲಿನಿಂದ 2024–25ನೇ ಸಾಲಿನವರೆಗೆ ಒಟ್ಟು 190 ಘಟಕ ಸ್ಥಾಪಿಸಲು ಅನುಮೋದನೆ ನೀಡಲಾಗಿರುತ್ತದೆ. ವಿವರ ಇಂತಿದೆ.

| Year | SCSP | TSP | Total |
|---|---|---|---|
| | No of Units Sanctioned | | |
| 2022-23 | 30 | 11 | 41 |
| 2023-24 | 51 | 15 | 66 |
| 2024-25 | 54 | 18 | 72 |

2022–23ನೇ ಸಾಲಿನಿಂದ 2024–25ನೇ ಸಾಲಿನವರೆಗೆ ಸದರಿ ಯೋಜನೆಯಡಿ ಬಿಡುಗಡೆ ಮಾಡಲಾದ ಅನುದಾನದ ವಿವರ ಇಂತಿದೆ.

(ಮೊತ್ತ ರೂ.ಲಕ್ಷಗಳಲ್ಲಿ)

| Year | SCSP | TSP | Total |
|---|---|---|---|
| 2022-23 | 6157.00 | 943.00 | 7100.00 |
| 2023-24 | 2759.50 | 1681.80 | 4441.30 |
| 2024-25 | 4305.00 | 1900.00 | 6205.00 |
| **Total** | **17547.96** | **5147.83** | **22695.79** |

**h) ಸೈಜಿಂಗ್ ಘಟಕ ಸ್ಥಾಪನೆಗೆ ಸಹಾಯಧನ:–**

ಸೈಜಿಂಗ್ ಅನುಭವ ಹೊಂದಿರುವ ನೇಕಾರರ ನೊಂದಾಯಿತ ಎಸ್.ಪಿ.ವಿ ಮೂಲಕ ವಿದ್ಯುತ್ ಮಗ್ಗ ಕ್ಲಸ್ಟರ್ / ವಿದ್ಯುತ್ ಮಗ್ಗ ಸಾಂದ್ರತೆಯಿರುವ ಪ್ರದೇಶಗಳಲ್ಲಿ ಸೈಜಿಂಗ್ ಘಟಕ ಸ್ಥಾಪಿಸಲು ಈ ಕೆಳಕಂಡಂತೆ ಮಾರ್ಗಸೂಚಿಯನ್ನು ಹೊರಡಿಸಲಾಗಿರುತ್ತದೆ.

- ಸರ್ಕಾರದ ಆದೇಶ ಸಂಖ್ಯೆ: ವಾಕೈ/96/ಜಕೈಯೋ/2014 ದಿನಾಂಕ: 31.01.2015 ರಲ್ಲಿ ರಲ್ಲಿ ಸಾಮಾನ್ಯ ವರ್ಗದ ಫಲಾನುಭವಿಗಳಿಂದ ಸೈಜಿಂಗ್ ಘಟಕ ಸ್ಥಾಪಿಸಲು ರೂ.300.00 ಲಕ್ಷ / ಯೋಜನಾ ವೆಚ್ಚದ ಶೇ.50 ರಷ್ಟು ಸರ್ಕಾರದ ಸಹಾಯಧನವನ್ನು ಒದಗಿಸಲು ಆದೇಶಿಸಲಾಗಿರುತ್ತದೆ.

…10

- ಸರ್ಕಾರದ ಆದೇಶ ಸಂಖ್ಯೆ: ವಾಕೈ/126/ಜಕೈಯೋ/2014 ದಿನಾಂಕ: 02.03.2015 ರಲ್ಲಿ ಪ.ಜಾ/ ಪ.ಪಂಗಡ ವರ್ಗದ ಫಲಾನುಭವಿಗಳಿಂದ ಸೈಜಿಂಗ್ ಘಟಕ ಸ್ಥಾಪಿಸಲು ರೂ.500.00 ಲಕ್ಷ / ಯೋಜನಾ ವೆಚ್ಚದ ಶೇ.90 ರಷ್ಟು ಸರ್ಕಾರದ ಸಹಾಯಧನವನ್ನು ಒದಗಿಸಲು ಆದೇಶಿಸಲಾಗಿರುತ್ತದೆ.

ಸದರಿ ಯೋಜನೆಯಡಿ 2015-16ನೇ ಸಾಲಿನಲ್ಲಿ 02 ಸಾಮಾನ್ಯ ಹಾಗೂ 2015-16, 2016-17 & 2017-18 ರಲ್ಲಿ 03 ಹೀಗೆ ಒಟ್ಟಾರೆಯಾಗಿ 05 ಸೈಜಿಂಗ್ ಘಟಕ ಸ್ಥಾಪಿಸಲು ಅನುಮೋದನೆ ನೀಡಲಾಗಿದ್ದು, 02 ಸಾಮಾನ್ಯ ಹಾಗೂ 01 ಸೈಜಿಂಗ್ ಘಟಕದ ಅನುಷ್ಠಾನ ಪೂರ್ಣಗೊಂಡಿರುತ್ತದೆ. ಉಳಿದಂತೆ 02 ಸೈಜಿಂಗ್ ಘಟಕಗಳು ಪ್ರಗತಿ ಹಂತದಲ್ಲಿರುತ್ತದೆ. ವಿವರ ಕೆಳಗಿನಂತಿರುತ್ತದೆ.

(ಮೊತ್ತ ರೂ.ಲಕ್ಷಗಳಲ್ಲಿ)

| ಕ್ರ.ಸಂ | ಯೋಜನೆ | ಭೌತಿಕ | ಆರ್ಥಿಕ |
|---|---|---|---|
| 1 | ಸಾಮಾನ್ಯ | 02 | 525.52 |
| 2 | SCSP | 03 | 948.56 |
| | ಒಟ್ಟು | **05** | **1474.08** |

i) **ಮಿನಿ ಪವರ್‌ಲೂಮ್ ಪಾರ್ಕ್ ಸ್ಥಾಪನೆಗೆ ಸಹಾಯಧನ:-**

ನೊಂದಾಯಿತ ಎಸ್.ಪಿ.ವಿ / ಸಂಘ ಸಂಸ್ಥೆಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಈ ಯೋಜನೆಯಡಿ ಪ್ರಯೋಜನ ಒದಗಿಸಲು ಈ ಕೆಳಕಂಡಂತೆ ಮಾರ್ಗಸೂಚಿಯನ್ನು ಹೊರಡಿಸಲಾಗಿರುತ್ತದೆ.

- ಸಾಮಾನ್ಯ ವರ್ಗದ ಕನಿಷ್ಠ 25 ನೊಂದಾಯಿತ ನೇಕಾರರಿಂದ ಕನಿಷ್ಠ 5 ಎಕರೆ ಜಮೀನನಲ್ಲಿ ಮಿನಿ ಪವರ್‌ಲೂಮ್ ಸ್ಥಾಪಿಸಲು ರೂ.100.00 ಲಕ್ಷಗಳ ಸರ್ಕಾರದ ಸಹಾಯಧನವನ್ನು ಒದಗಿಸಲು ಆದೇಶಿಸಲಾಗಿರುತ್ತದೆ.
- ಪ.ಜಾ/ ಪ.ಪಂಗಡ ವರ್ಗದ ಕನಿಷ್ಠ 15 ನೊಂದಾಯಿತ ಪ.ಜಾ / ಪ.ಪಂ ನೇಕಾರರಿಂದ ಕನಿಷ್ಠ 2 ಎಕರೆ ಜಮೀನನಲ್ಲಿ ಮಿನಿ ಪವರ್‌ಲೂಮ್ ಸ್ಥಾಪಿಸಲು ಗರಿಷ್ಠ ರೂ.300.00 ಲಕ್ಷ / ಯೋಜನಾ ವೆಚ್ಚದ ಶೇ.90 ರಷ್ಟು ಒದಗಿಸಲು ಆದೇಶಿಸಲಾಗಿರುತ್ತದೆ.

(ಮೊತ್ತ ರೂ.ಲಕ್ಷಗಳಲ್ಲಿ)

| ಕ್ರ.ಸಂ | ಯೋಜನೆ | ಭೌತಿಕ | ಆರ್ಥಿಕ |
|---|---|---|---|
| 1 | ಸಾಮಾನ್ಯ | 02 | 200.00 |
| 2 | SCSP | 04 | 982.12 |
| | ಒಟ್ಟು | **06** | **1182.12** |

j) **ಪ್ರೊಸೆಸ್ಸಿಂಗ್ ಘಟಕ ಸ್ಥಾಪನೆಗೆ ಸಹಾಯಧನ:-**

ಪ್ರೊಸೆಸ್ಸಿಂಗ್ ಅನುಭವ ಹೊಂದಿರುವ ನೊಂದಾಯಿತ ಎಸ್.ಪಿ.ವಿ ಮೂಲಕ ವಿದ್ಯುತ್ ಮಗ್ಗ ಕ್ಲಸ್ಟರ್ / ವಿದ್ಯುತ್ ಮಗ್ಗ ಸಾಂದ್ರತೆಯಿರುವ ಪ್ರದೇಶಗಳಲ್ಲಿ ಪ್ರೊಸೆಸ್ಸಿಂಗ್ ಘಟಕ ಸ್ಥಾಪಿಸಲು ಗರಿಷ್ಠ ರೂ.500.00 ಲಕ್ಷ / ಯೋಜನಾ ವೆಚ್ಚದ ಶೇ.50 ರಷ್ಟು ಸರ್ಕಾರದ ಸಹಾಯಧನ ಒದಗಿಸಲು ಆದೇಶಿಸಲಾಗಿರುತ್ತದೆ.

ಸದರಿ ಯೋಜನೆಯಡಿ 03 ಪ್ರೊಸೆಸ್ಸಿಂಗ್ ಘಟಕ ಸ್ಥಾಪಿಸಲು ಅನುಮೋದನೆ ನೀಡಲಾಗಿದ್ದು, 02 ಘಟಕದ ಅನುಷ್ಠಾನ ಪೂರ್ಣಗೊಂಡಿರುತ್ತದೆ. ಉಳಿದಂತೆ 01 ಪ್ರೊಸೆಸ್ಸಿಂಗ್ ಘಟಕ ಸ್ಥಾಪನೆ ಪ್ರಗತಿ ಹಂತದಲ್ಲಿರುತ್ತದೆ. ವಿವರ ಕೆಳಗಿನಂತಿರುತ್ತದೆ.

(ಮೊತ್ತ ರೂ.ಲಕ್ಷಗಳಲ್ಲಿ)

| ಕ್ರ.ಸಂ | ಭೌತಿಕ | ಆರ್ಥಿಕ |
|---|---|---|
| 1 | 03 | 1250.00 |

ಸಂಖ್ಯೆ: **CI 266 JAKE 2025**

(ಶಿವಾನಂದ ಎಸ್. ಪಾಟೀಲ)
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ/ಹಾಗೂ ಕೃಷಿ ಮಾರುಕಟ್ಟೆ ಸಚಿವರು